ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಕೋರ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **15.10.2013**

ಈ ವಾರದ ಮುನ್ಸೂಚನೆ (ದಿನಾಂಕ **16-10-13 to 20.10.13** ವರೆಗೆ)

ನಿಯತಾಂಕಗಳು	16.10.13	17.10.13	18.10.13	19.10.13	20.10.13
ಮಳೆ (ಮಿ ಮಿ)	17	13	8	3	14
ಗರಿಷ್ಠ ಉಷ್ಣಾಂಶ(ಡಿ.ಸೆ.)	31	30	30	31	31
ಕನಿಷ್ಠ ಉಷ್ಣಾಂಶ (ಡಿ.ಸೆ.)	21	19	19	19	20
ಮೋಡ (ಪ್ರಮಾಣ)	6	6	4	5	5
ಅರ್ದ್ರತೆ ೭.೨೦ ಬೆ (ಶೇ)	82	81	80	82	81
ಅರ್ದ್ರತೆ ೨.೨೦ ಮ (ಶೇ)	56	63	60	55	53
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	3	4	3	5
ಗಾಳಿಯ ದಿಕ್ಕು (ಡಿಗ್ರಿ)	310	300	320	340	300

ಈ ವಾರದ ಮುನ್ಸೂಚನೆಯ ಪ್ರಕಾರ ಮತ್ತು ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಕವಿದ ವಾತಾವರಣವಿದ್ದು ಸಂಜೆ ಅಥವಾ ರಾತ್ರಿಯ ವೇಳೆಯಲ್ಲಿ ಚದುರಿದಂತೆ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 30.0-31.0^{o}C ಮತ್ತು ಕನಿಷ್ಠ 19-21°C ಇರಲಿದೆ. ಬೆಳಗಿನ ಅರ್ದ್ರತೆ ಪ್ರಮಾಣ ಶೇ 80-82% ಇದ್ದು ಮಧ್ಯಾಹ್ನ 56-63 % ಇದ್ದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 3-5 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಬಿತ್ತನೆ ಮಾಡದ ಪ್ರದೇಶದಲ್ಲಿ ಸಾಕಷ್ಟು ತೇವಾಂಶವಿದ್ದಲ್ಲಿ ಅಲ್ಪಾವಧಿಯ ದ್ವಿದಳ ದಾನ್ಯ ಬೆಳೆ ತಳಿಗಳಾದ ಹುರಳಿ (ಕೆ,ಬಿ,ಹೆಚ್-1, ಪಿ,ಹೆಚ್,ಜಿ-9) ಬಿತ್ತನೆ ಮಾಡುವುದು ಉತ್ತಮ.
- ರಾಗಿ ಮತ್ತು ಮುಸುಕಿನ ಜೋಳಕ್ಕೆ ಶಿಫಾರಸ್ಸು ಮಾಡಿದ ಸಾರಜನಕ ಮೇಲುಗೊಬ್ಬರ ಕೊಡಲು ಸೂಚಿಸಲಾಗಿದೆ.
- ರಾಗಿಯಲ್ಲಿ ಬೆಂಕಿರೋಗವಿರುವುದು ಕಂಡುಬಂದಿದೆ ಆದ್ದರಿಂದ ರೋಗ ಬಂದಿರುವ ಕಡೆ ಬಾವಿಸ್ಟಿನ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸವುದು ಒಳ್ಳೆಯದು.
- ನೆಲೆಗಡಲೆಗೆ ಬೆಳೆಯಲ್ಲಿ ಎಲೆಚುಕ್ಕೆ ರೋಗ (ಟಿಕ್ಕಾ) ಬರುವ ಲಕ್ಷಣಗಳಿರುವುದರಿಂದ ಕಾರ್ಬೆಂಡೈಜಿಮ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ತೊಗರಿಯಲ್ಲಿ ಗೂಡು ಮಾರು ಅಥವಾ ಹೂ ಗೊಂಚಲು ಮತ್ತು ಎಲೆಯ ಸುಳಿಯನ್ನು ಮುದುಡಿ ಬಲೆ ಕಟ್ಟುವ ಹುಳು ಕಂಡುಬಂದಲ್ಲಿ ಮಿಥೊಮಿಲ್ 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.